## ಉತ್ತಮ ಸಂಪಾದಕೀಯ

‘ಪಾಪವನ್ನು ಬಿತ್ತಿ ಪುಣ್ಯ ನಿರೀಕ್ಷಿಸಲಾಗದು’ (ರಘುನಾಥ ಚ.ಹ., ಡಿ.9) ಎಂಬ ಶೀರ್ಷಿಕೆಯಲ್ಲಿ ಪ್ರಕಟವಾದ ‘ನಿಮ್ಮೊಡನೆ’ ಲೇಖನ ಚೆನ್ನಾಗಿತ್ತು. ಈಗಿನ ಅಧಿಕಾರಿಗಳಲ್ಲಿ ಭ್ರಷ್ಟಾಚಾರ, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಾರೀಕರಣ ತಾಂಡವವಾಡುತ್ತಿವೆ. ಎಲ್ಲಿಯೂ ನೈತಿಕತೆ ಉಳಿದಿಲ್ಲ. ಆಗಾಗ ಅಧಿಕಾರಿಗಳ ಮೇಲೆ ದಾಳಿ ಆದರೂ ಅಪರಾಧಿಗಳಿಗೆ ಸರಿಯಾದ ಶಿಕ್ಷೆ ಆಗಿಲ್ಲ. ಲೇಖಕರು ನೂರಕ್ಕೆ ನೂರು ಸತ್ಯವಾದ ಮಾತು ಎತ್ತಿ ತೋರಿಸಿದ್ದಾರೆ. ಇದಕ್ಕೆ ಸರ್ಕಾರ ಏನು ಹೇಳುತ್ತದೆ ಎಂಬುದನ್ನು ಕಾದು ನೋಡಬೇಕು.

—ಬಿ. ಎಸ್. ಮುಳ್ಳೂರ, ಹಲಗತ್ತಿ

ಲೇಖನ ‘ಬಿತ್ತಿದಂತೆ ಬೆಳೆ’ ಎಂಬ ದಾರ್ಶನಿಕರ ಮಾತನ್ನು ನೆನಪಿಸಿತು. ಭ್ರಷ್ಟಾಚಾರದ ವಿವಿಧ ಮಜಲುಗಳನ್ನು ತಿಳಿಸಿದ್ದಾರೆ. ವೈಯಕ್ತಿಕ ಸಿಟ್ಟು ಸಂಘಟಿತಗೊಳ್ಳುತ್ತಿಲ್ಲ. ಕಾರಣ, ರಾಜಕೀಯ ವ್ಯವಸ್ಥೆ ಸಮಾಜವನ್ನು ಬೇರುಮಟ್ಟದಲ್ಲಿ ಛಿದ್ರ ಛಿದ್ರ ಮಾಡಿರುವುದು. ಜಾತಿ ಜಾತಿಗಳಲ್ಲಿ ಭಿನ್ನಾಭಿಪ್ರಾಯ, ಆಹಾರದಲ್ಲಿ ಭಿನ್ನಾಭಿಪ್ರಾಯ ಮೂಡಿಸಿ ಯಾರೂ ಒಂದಾಗದಂತೆ ಮಾಡಿದ್ದಾರೆ. ಮುಂದೆ ಏನಾಗುತ್ತದೆಯೋ ಆ ದೇವರೇ ಬಲ್ಲ!

— ತಿಮ್ಮರಾಜು, ದಾವಣಗೆರೆ

## ಪರಿಸರದ ಕೆಲಸ

‘ಪರಿಸರದ ಕೆಲಸ ದೇವರ ಕೆಲಸ’ (ಸಹನಾ ಕಾಂತಬೈಲು, ಡಿ.9) ಓದಿ ಖುಷಿಯಾಯಿತು. ಮಡಿಕೇರಿ ಆಕಾಶವಾಣಿಯ ವಿಶಾಲ ಆವರಣದಲ್ಲಿ ನೂರಕ್ಕಿಂತ ಅಧಿಕ ಜಾತಿಯ ಗಿಡಗಳನ್ನು ನೆಟ್ಟು ಪೋಷಿಸುತ್ತಾ ‘ರಾಜ್ಯ ಪರಿಸರ ಪ್ರಶಸ್ತಿ’ಗೆ ಭಾಜನರಾದ ಅಲ್ಲಿನ ಅಧಿಕಾರಿ ವಿಜಯ್ ಅಂಗಡಿ ಅವರ ಹಸಿರು ಪ್ರೇಮ ಅಭಿನಂದನೀಯ.

—ಪಿ. ಜಯವಂತ ಪೈ, ಕುಂದಾಪುರ

ಲೇಖಕರು ತುಂಬಾ ಸೊಗಸಾಗಿ ಕೈತೋಟದ ಬಗ್ಗೆ ಬರೆದಿದ್ದಾರೆ. ಮನೆಯ ಮುಂದೆ ಗಿಡಮರಗಳನ್ನು ಬೆಳೆಸಿ ಅದು ಹೂವು ಹಣ್ಣು ಕೊಟ್ಟಾಗ ಆಗುವ ಸಂತೋಷವೇ ಮನಸ್ಸಿಗೆ ಮುದ ನೀಡುವಂತದ್ದು. ನನಗೆ ಸುಮಾರು 16–17 ವರ್ಷಗಳಾಗಿದ್ದಾಗ ನಮ್ಮ ಮನೆಯ ಹತ್ತಿರವಿದ್ದ ಪಿಇಎಸ್ ಕಾಲೇಜಿನಲ್ಲಿ ಗಿಡಗಳನ್ನು ಹಾಗೂ ಅದಕ್ಕೆ ಸರ್ವೆ ಮರದ ಬೇಲಿಗಳನ್ನು ಕೊಡುತ್ತಿದ್ದರು. ನಾನು ಹಾಗೂ ಗೆಳೆಯರು ಅಲ್ಲಿಂದ ಮನಸೋ ಇಚ್ಛೆ ಗಿಡಗಳನ್ನು ನನ್ನ ಹದಿವಯಸ್ಸಿನ ದಿನಗಳ ನೆನಪಿಸಿದ ಲೇಖಕರಿಗೆ ಧನ್ಯವಾದ.

—ಎಸ್. ವಿ. ಗೋಪಾಲ್ ರಾವ್, ಬೆಂಗಳೂರು

ಆಕಾಶವಾಣಿಯ ಅಪರೂಪದ ಅಧಿಕಾರಿ ಡಾ. ವಿಜಯ್ ಅಂಗಡಿ ಅವರ ಪರಿಸರ ಪ್ರೇಮ ಮೆಚ್ಚುಗೆ ಆಯ್ತು. ಮನೆ ಮುಂದಿನ ಜಾಗವನ್ನೇ ನೀಟಾಗಿ ಇಟ್ಕೊಳ್ಳೋದು ಕಷ್ಟ. ಅಂಥದ್ದರಲ್ಲಿ ತಾವು ಕೆಲಸ ಮಾಡುವ ಜಾಗದ ಸುತ್ತಲಿನ ಪರಿಸರದ ಬಗ್ಗೆ ಅಷ್ಟೊಂದು ಕಾಳಜಿ ಮಾಡುತ್ತಾ ನೀರೆರೆಯುವುದು, ಕಳೆ ತೆಗೆಯುವ ಕೆಲಸ ಮಾಡುವುದನ್ನು ಕೇಳಿ ಅಭಿಮಾನ ಮೂಡಿತು.

—ನಿಂಗಮ್ಮ ಅಶೋಕ ಭಾವಿಕಟ್ಟಿ, ಹುನಗುಂದ

ಮಡಿಕೇರಿ ಆಕಾಶವಾಣಿ ಕೇಂದ್ರದ ಅಧಿಕಾರಿ ವಿಜಯ್ ಅಂಗಡಿಯವರದ್ದು ಎಂತಹ ದೊಡ್ಡ ಕಾರ್ಯ! ಎಂಥ ಒಳ್ಳೆಯ ಮನಸ್ಸು! ನಿಲಯದ ವಠಾರವನ್ನು ಉಪಯುಕ್ತ ಮರಗಿಡಗಳಿಂದ ಹಚ್ಚ ಹಸಿರನಾಗಿಸಿದ ಅವರ ನಿಸ್ವಾರ್ಥ ಕಾಯಕಕ್ಕೆ ಬೆಲೆಕಟ್ಟಲಾಗದು. ಪರಿಸರದ ಕುರಿತಾಗಿ ಸದಾ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುವ ಆಕಾಶವಾಣಿ ತಾನೇ ತನ್ನ ನೆಲದಲ್ಲಿ ಹಾಗೆ ಮಾಡಿ ತೋರಿಸಿ ಮಾದರಿ ಎನಿಸಿಕೊಂಡಿದೆ.

—ರಮೇಶ್ ರಾವ್, ಕೈಕಂಬ



## ಆಕರ್ಷಕ ಫೋಟೊಕಥೆ

‘ಮೊಗೆದಷ್ಟೂ ಮೋಹಕ ರೋಚಕ’ (ಎಂ. ಆರ್. ಭಗವತಿ ಡಿ. 9) ಲೇಖನ ಓದಿದ ಕೂಡಲೇ ನೆನಪಾದದ್ದು ಹಿಂದಿಯ ಪ್ರಸಿದ್ಧ ಚಲನಚಿತ್ರ ‘ ತ್ರೀ ಇಡಿಯಟ್ಸ್’. ಅದರಲ್ಲಿ ಅಮೀರ್ ಖಾನ್ ತನ್ನ ಸ್ನೇಹಿತನ ಪ್ರತಿಭೆಯನ್ನು ಗುರುತಿಸಿ ಅವನನ್ನು ಎಂಜಿನಿಯರಿಂಗ್ ಓದುವುದನ್ನು ಬಿಡಿಸಿ ಒಬ್ಬ ಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕನನ್ನಾಗಿ ಮಾಡುತ್ತಾನೆ. ಹಾಗೆಯೇ ಮೋಹನ್ ಥಾಮಸ್ ಕೂಡ ಓದಿದ್ದು ಎಂಜಿನಿಯರಿಂಗ್ ಆದರೂ ಛಾಯಾಗ್ರಾಹಕರಾಗಿ ಅದ್ಭುತ ಚಿತ್ರಗಳನ್ನು ಸೆರೆಹಿಡಿದಿದ್ದಾರೆ. ಹೀಗೆಯೇ ಇನ್ನಷ್ಟು ಅವರ ಚಿತ್ರಗಳನ್ನು ನೋಡುವ ಭಾಗ್ಯ ನಮ್ಮದಾಗಲಿ.

—ಮಧುಮತಿ ಅಭಿಷೇಕ್, ಚಿತ್ರದುರ್ಗ



## ಹೂಡಿದವನು ಬಾಳಿಯಾನು

‘ಹೂಡಿದವನು ಬಾಳಿಯಾನು’ (ಎನ್. ಕಾವ್ಯಶ್ರೀ, ಡಿ. 9) ಲೇಖನ ಜಾಣ್ಮೆಯ ಹೂಡಿಕೆಯ ಮೇಲೆ ಬೆಳಕು ಚೆಲ್ಲುವಂತಿದೆ. ನಿವೃತ್ತಿ ಹೊಂದುವುದು ಅಂದರೆ ಅದು ಜೀವನದ ಸಂಧ್ಯಾಕಾಲದ ಆರಂಭ ಎಂದೇ ಹೇಳಬಹುದು. ವೃತ್ತಿಜೀವನ ಕೊನೆಗೊಳ್ಳುವುದರೊಂದಿಗೆ ನಿಯಮಿತ ಆದಾಯದ ಮೂಲಗಳು ಸಹ ಬತ್ತಿ ಹೋಗಲಾರಂಭಿಸುತ್ತದೆ. ಜೊತೆಗೆ ಆರೋಗ್ಯವೂ ಕೂಡ ಕೈಕೊಡುವುದರೊಂದಿಗೆ ಕ್ಷೀಣಿಸುತ್ತಾ ಹೋಗುತ್ತದೆ. ಹೀಗಾಗಿ ನೆಮ್ಮದಿಯ ನಿವೃತ್ತಿ ಜೀವನಕ್ಕೆ ಆದಷ್ಟೂ ಮೊದಲೇ ಹಣಕಾಸು ಯೋಜನೆ ರೂಪಿಸಿಕೊಳ್ಳುವುದು ಅಗತ್ಯ.

—ಬೆಂ. ಮು. ಮಾರುತಿ, ಬೆಂಗಳೂರು

## ಅಂಗೈ ಅಗಲದ ಜಾಗ

‘ಅಂಗೈ ಅಗಲದ ಜಾಗ’ (ಎಲ್.ಸಿ. ಸುಮಿತ್ರಾ, ಡಿ. 9) ಪ್ರಬಂಧ ಅತ್ಯಂತ ಆಪ್ತವಾಗಿತ್ತು. ಮನುಷ್ಯ ಸಂತೋಷದಿಂದ ಬದುಕಲು ಎಕರೆಗಟ್ಟಲೆ ಜಾಗವೇ ಬೇಕಿಲ್ಲ, ಅಂಗೈ ಅಗಲದ ಜಾಗದಲ್ಲೇ ಆತ್ಮತೃಪ್ತಿಯಿಂದ ಬದುಕಬಹುದು. ಭೂಮಿಯ ಮೇಲಿನ ಅತಿಯಾದ ವ್ಯಾಮೋಹವೇ ನಮ್ಮ ಅವನತಿಗೆ, ಪ್ರಕೃತಿ ವಿಕೋಪಕ್ಕೆ ಕಾರಣ ಎಂಬ ಕಟುಸತ್ಯವನ್ನು ಲೇಖಕಿ ಮಾರ್ಮಿಕವಾಗಿ ತಿಳಿಸಿದ್ದಾರೆ.

—ಪೂರ್ಣಿಮಾ ಭಟ್, ಮೈಸೂರು

## ಮೆಚ್ಚುವಂಥ ಕಥೆ

‘ಕಳವಳ’ (ಸಿ.ಎನ್. ಮುಕ್ತಾ, ಡಿ. 9) ಕಥೆಯಲ್ಲಿ ಮಾಳವಿಕಾ ಮತ್ತು ಪ್ರಿಯಾ ಅನಿರೀಕ್ಷಿತವಾಗಿ ಮೆಟ್ರೊದಲ್ಲಿ ಭೇಟಿಯಾದಾಗ ಪ್ರಿಯಾ ತನ್ನ ವೃತ್ತಾಂತವನ್ನು ಮಾಳವಿಕಾಗೆ ಹೇಳುವಳು. ಮುಂದೆ ಪ್ರಿಯಾಳನ್ನು ತನ್ನ ತಮ್ಮ ಮಾಧವನಿಗೆ ತಂದುಕೊಳ್ಳುವ ಮಾಳವಿಕಾ ನಿರ್ಧಾರ ಮೆಚ್ಚುವಂಥದ್ದು. ಮಾಧವನಿಗೆ ತನ್ನ ಹಿಂದಿನ ವೃತ್ತಾಂತವನ್ನು ಮದುವೆಗೆ ಮೊದಲೇ ತಿಳಿಸಿದ ಪ್ರಿಯಾಳ ಗುಣ ಮತ್ತೂ ಮೆಚ್ಚುವಂಥದ್ದು.

—ಎಂ.ಟಿ. ರಮಾನಂದ ರೆಡ್ಡಿ, ಚಿತ್ರದುರ್ಗ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in